# ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಸಂದೇಶ



ಸ್ವಾಮಿ ರಾಘವೇಶಾನಂದ

**ಸ್ವಾಮಿ ವಿವೇಕಾನಂದರು ವಿದ್ಯಾರ್ಥಿಗಳ ಚಿರನೂತನ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಈ ಅಂಶವನ್ನು ಪರಿಣಾಮಕಾರಿಯಾಗಿ ವಿವರಿಸಿರುವ ಲೇಖಕರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಇವರು ಉತ್ತಮ ಬರಹಗಾರರು ಮತ್ತು ವಾಗ್ಮಿಗಳು.**

**"ಓ ನನ್ನ ಪುತ್ರರೇ! ನೀವೆಲ್ಲರೂ ಪುರುಷಸಿಂಹರಾಗಿರಿ! ಇದೇ ನನಗೆ ಬೇಕಾದದ್ದು! ನೀವು ಸ್ವಲ್ಪವಾದರೂ ಯಶಸ್ವಿಗಳಾದರೆ ನನ್ನ ಜೀವನ ಸಾರ್ಥಕವಾಯಿತೆಂದುಕೊಳ್ಳುತ್ತೇನೆ!"** – ಭಾರತದ ಯುವಜನತೆಯ ಮೇಲ್ಮೆಗಾಗಿ ತಮ್ಮ ರಕ್ತವನ್ನೇ ಬಸಿದ ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರ ಕರೆ ಇದು!

ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಆಗಸದಷ್ಟು ವಿಶಾಲ, ಸಾಗರದಷ್ಟು ಆಳ. ಅದರ ಕುರಿತಾಗಿ ಹೇಳಹೊರಟರೆ ಎಲ್ಲಿಂದ ಪ್ರಾರಂಭಿಸುವುದು, ಹೇಗೆ ಮಾತನಾಡುವುದು ಎಂಬುದೇ ತಿಳಿಯುವುದಿಲ್ಲ. ಏಕೆಂದರೆ ಎಷ್ಟು ಹೇಳಿದರೂ, ಅವರ ವ್ಯಕ್ತಿತ್ವವೆಂಬ ಸಹಸ್ರದಲ ಪುಷ್ಪದ ಒಂದು ಎಸಳನ್ನು ಪರಿಚಯಿಸಿದ ತೃಪ್ತಿಯೂ ಉಂಟಾಗುವುದಿಲ್ಲ.

ಇಂದು ನಮ್ಮನ್ನು ಬೆಂಬತ್ತಿರುವ ಪ್ರಮುಖ ಪ್ರಶ್ನೆಗಳೆಂದರೆ, **೧) ಯುವಜನರ ಸಮಸ್ಯೆ ಮತ್ತು ೨) ರಾಷ್ಟ್ರಪ್ರಜ್ಞೆಯ ಅಭಾವ.** ಆದ್ದರಿಂದ ಇವುಗಳಿಗೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದರ ಜೀವನವನ್ನು ಮನನ ಮಾಡುವುದು ಇಂದಿಗೆ ತುಂಬ ಪ್ರಸ್ತುತ.

ನಮ್ಮ ಯುವಜನ ಸ್ವಾಮೀಜಿಯವರ ಜೀವನವನ್ನು ಆಸ್ಥೆ ವಹಿಸಿ ಅಧ್ಯಯನ ಮಾಡಿದಾಗ ಅದು ಸ್ಫೂರ್ತಿದಾಯಕ ಮಾತ್ರವಲ್ಲ, ಇದು ಅವರ ಎಲ್ಲ ಸಮಸ್ಯೆಗಳಿಗೂ ಮಾರ್ಗದರ್ಶಕ ಕೂಡ. ವಿದ್ಯಾರ್ಥಿಗಳು, ಯುವಜನರು ಯಶಸ್ವಿಯಾಗಲು ಅವರಲ್ಲಿರಬೇಕಾದದು ಏನು, ಕಲಾತ್ಮಿಕತೆಯೇ, ಭಾವುಕತೆಯೇ, ಶರೀರಶಕ್ತಿಯೇ, ಶ್ರೀಮಂತಿಕೆಯೇ ಅಥವಾ ಏಕಾಗ್ರತೆಯೇ? ಈ ಎಲ್ಲ ಅಂಶಗಳೂ ಯುವಜನರ ವ್ಯಕ್ತಿತ್ವವಿಕಾಸಕ್ಕೆ ಅಗತ್ಯ, ನಿಜ. ಆದರೆ ಇವೆಲ್ಲವನ್ನೂ ನೀಡಬಲ್ಲ ಮತ್ತು ಇದಕ್ಕಿಂತ ಹೆಚ್ಚಿನದನ್ನೂ ಒದಗಿಸಿಕೊಡಬಲ್ಲ ಒಂದು ರಹಸ್ಯ ತಂತ್ರವಿದೆ. ಅದನ್ನು ಕಲಿಯುವ ದಕ್ಕಾದರೂ ಯುವಜನರು ಸ್ವಾಮೀಜಿಯವರ ವಿದ್ಯಾರ್ಥಿಜೀವನವನ್ನು ಮನಸ್ಸಿಟ್ಟು ಓದಬೇಕು. ಏನು ಆ ಗುಟ್ಟು? ಯಾವುದು ಆ ರಹಸ್ಯ ತಂತ್ರ? **ಅದೇ ಪವಾಡಸದೃಶವಾದ ಶೀಲಶಕ್ತಿ!**

ಈ **ಶೀಲ, ಚಾರಿತ್ರ್ಯ, ನೈತಿಕತೆ, ಪಾವಿತ್ರ್ಯ** ಇವುಗಳೆಡೆಗೆ ನಮ್ಮ ಯುವಜನ ಎಷ್ಟು ಗಮನ ಹರಿಸಿದರೆ ಅಷ್ಟು ಅವರ ವ್ಯಕ್ತಿತ್ವ ನಳನಳಿಸಲಾರಂಭಿಸುತ್ತದೆ. ಏಕೆಂದರೆ ಯೌವನದ ಸಾರ ಇರುವುದೇ ಈ ಶೀಲದಲ್ಲಿ!

ಸ್ವಾಮಿ ವಿವೇಕಾನಂದರು ನರೇಂದ್ರನಾಗಿ ಕಾಲೇಜಿನಲ್ಲಿ ಓದುತ್ತಿದ್ದಾಗ ಅವರ ವ್ಯಕ್ತಿತ್ವ ಹೇಗಿತ್ತು ಎಂಬುದನ್ನು ಅವರ ಸಹಪಾಠಿಯೊಬ್ಬ ಮುಂದೆ ಹೀಗೆ ಸ್ಮರಿಸಿಕೊಳ್ಳುತ್ತಾನೆ :

"ಆಗಲೂ ನರೇಂದ್ರ ಆಧ್ಯಾತ್ಮಿಕತೆಯ ಅಗ್ನಿಜ್ವಾಲೆಯಂತಿದ್ದ. ಅವನೆಂದೂ ನೀತಿಯ ಚೌಕಟ್ಟನ್ನು ಮೀರದಿರುವುದನ್ನು ಕಂಡು ನಾನು ಅವನನ್ನು 'ಮಡಿ ಮನುಷ್ಯ' ಎಂದು ತಮಾಷೆ ಮಾಡುತ್ತಿದ್ದೆ. ಆದರೆ ಅವನ ಜೊತೆಯಲ್ಲಿರುವಾಗ ಮಾತ್ರ ನನ್ನ ಮನಸ್ಸು ಅಳುಕಿ ಮುದುಡಿಹೋಗುತ್ತಿತ್ತು. ಅವನ ಮುಂದೆ ನನ್ನ ನೈತಿಕತೆಯ ಅಭಾವ ನನ್ನ ಕಣ್ಣನ್ನು ಕುಕ್ಕುತ್ತಿತ್ತು. ನೈತಿಕ–ಆಧ್ಯಾತ್ಮಿಕ ತೇಜಸ್ಸು ಅವನಿಂದ ಅಕ್ಷರಶಃ ಹೊರಸೂಸುತ್ತಿತ್ತು. ಅದು ಇತರರ ಮೇಲೂ ಪ್ರಭಾವ ಬೀರುವಷ್ಟು ಪ್ರಖರವಾಗಿತ್ತು."

ಸುಪ್ರಸಿದ್ಧ ಶಿಕ್ಷಣತಜ್ಞರೂ, ಪಂಡಿತರೂ ಆದ ಡಾ. ಬ್ರಜೇಂದ್ರ ನಾಥ ಸೀಲರು ತರುಣ ನರೇಂದ್ರನನ್ನು ನಿಕಟವಾಗಿ ಬಲ್ಲವರು; ಕಾಲೇಜಿನಲ್ಲಿ ಅವನಿಗಿಂತ ಒಂದು ವರ್ಷ ಹಿರಿಯರು. ವಿದ್ಯಾರ್ಥಿ

ದೆಸೆಯಲ್ಲಿ ನರೇಂದ್ರನ ವ್ಯಕ್ತಿತ್ವ ಹೇಗಿತ್ತು ಎಂಬುದನ್ನು ಬಣ್ಣಿಸುತ್ತ ಇವರು ಹೀಗೆನ್ನುತ್ತಾರೆ:

"ನಿಸ್ಸಂದೇಹವಾಗಿ ಅವನೊಬ್ಬ ಪ್ರತಿಭಾಸಂಪನ್ನನಾದ ತರುಣ; ಜನರೊಂದಿಗೆ ಸಹಜಸುಲಭವಾಗಿ ಬೆರೆಯಬಲ್ಲ ಸರಳಜೀವಿ; ಶ್ರೇಷ್ಠದರ್ಜೆಯ ಹಾಡುಗಾರ; ಗೆಳೆಯರ ಗೋಷ್ಠಿಗೆ ಅವನಿದ್ದರೇ ಜೀವಕಳೆ! ಮೇಲ್ನೋಟಕ್ಕೆ ವಕ್ರೋಕ್ತಿಯ ನಿಂದಕ; ಆದರೆ ಆ ಸರ್ವತಿರಸ್ಕಾರದ ಮುಸುಕಿನಲ್ಲಿ ಅಡಗಿದ್ದುದು ಮೃದುತರ ಹೃದಯ; ನೋಡುವವರ ಕಣ್ಣಿಗೆ ಸ್ವತಂತ್ರ ಮನೋಭಾವದ ಉಲ್ಲಾಸಿ ತರುಣ; ಆದರೆ ಅವನೊಳಗಿತ್ತು, ಉಕ್ಕಿನಂಥ ಇಚ್ಛಾಶಕ್ತಿ..... ಆತನಲ್ಲಿ ಪ್ರಖರ ಬುದ್ಧಿಸೂಕ್ಷ್ಮತೆಯಿಂದ ಬೆಳಗುತ್ತಿರುವ ಉದಾತ್ತ ಪರಿಶುದ್ಧ ಚಾರಿತ್ರ್ಯವನ್ನು ನಾನು ಕಂಡುಕೊಂಡೆ......"

ಈ ಬಗೆಯ ನೈತಿಕ ಬಲಸಂಪನ್ನನಾಗಿದ್ದರಿಂದಲೇ ನರೇಂದ್ರ ಆಟ–ಪಾಠ, ಕಲೆ–ಸಾಹಿತ್ಯ ಎಲ್ಲದರಲ್ಲೂ ಅಪ್ರತಿಮ ಪ್ರವೀಣನಾಗಲು ಸಾಧ್ಯವಾಯಿತು. ಸ್ಮರಣಶಕ್ತಿಗೂ ಶೀಲವೇ ಕೀಲಿಕೈ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಮುಂದೆ ಅವರು ಪರಿವ್ರಾಜಕ ಸಂನ್ಯಾಸಿಯಾಗಿ ಭಾರತದಲ್ಲಿ ಸಂಚರಿಸುತ್ತ ಬೆಳಗಾವಿಗೆ ಬಂದಾಗ ನಡೆದ ಒಂದು ಘಟನೆ ಸ್ವಾರಸ್ಯಪೂರ್ಣವಾಗಿದೆ. ಅಲ್ಲಿ ಅವರು ಹರಿಪದ ಮಿತ್ರ ಎಂಬ ಅರಣ್ಯಾಧಿಕಾರಿಯ ಅತಿಥಿಯಾಗಿದ್ದರು. ಒಮ್ಮೆ ಅವರು ಮಾತಿನ ನಡುವೆ ಆಂಗ್ಲ ಸಾಹಿತ್ಯಕೃತಿಯೊಂದರ ಪುಟಪುಟಗಳನ್ನೇ ಉದಾಹರಿಸಿದ್ದನ್ನು ಕಂಡು ದಂಗುಬಡಿದ ಹರಿಪದ, ಅವರ ಅದ್ಭುತ ನೆನಪಿನ ಶಕ್ತಿಯ ಗುಟ್ಟೇನು ಎಂದು ಕೇಳಿದ. ಆಗ ಸ್ವಾಮೀಜಿ ಹೀಗೆನ್ನುತ್ತಾರೆ :

"ದೈಹಿಕ ಶಕ್ತಿಗಳ ಮೇಲೆ ಹಿಡಿತ ತಂದುಕೊಳ್ಳುವುದರಿಂದ ಮನಶ್ಶಕ್ತಿ ಸಿದ್ಧಿಸುತ್ತದೆ. ದೈಹಿಕ ಶಕ್ತಿಗಳನ್ನು ವ್ಯರ್ಥವಾಗಿಸದೆ, ಅವುಗಳನ್ನು ಮಾನಸಿಕ ಶಕ್ತಿಯಾಗಿ ಪರಿವರ್ತಿಸಬೇಕು. ಗೊತ್ತುಗುರಿಯಿಲ್ಲದೆ ನಿರ್ಲಕ್ಷ್ಯದಿಂದ ದೈಹಿಕಶಕ್ತಿಯನ್ನು ಭೋಗಲಾಲಸೆಗಾಗಿ ಪೋಲು ಮಾಡುವುದು ಅತ್ಯಂತ ಅಪಾಯಕಾರಿ. ಇದರಿಂದ ಮನಸ್ಸಿನ ಧಾರಣಾಶಕ್ತಿಯೇ ಉಡುಗಿಹೋಗುತ್ತದೆ..."

ಇಂಥ ಅನೇಕ ನಿದರ್ಶನಗಳು ಮತ್ತು ಸಂದೇಶಗಳಿಂದ ತುಂಬಿದೆ ಸ್ವಾಮೀಜಿಯವರ ಜೀವನ. ಯುವಜನರು, ವಿದ್ಯಾರ್ಥಿಗಳು ಅದನ್ನು ಓದಿ ಲಾಭ ಪಡೆಯಲು ಮನಸ್ಸು ಮಾಡಬೇಕು, ಅಷ್ಟೆ.

ಇನ್ನು, ಸ್ವಾಮಿ ವಿವೇಕಾನಂದರ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿಗಳ ಕುರಿತಾಗಿ ಹೇಳಹೊರಟರಂತೂ ಅದಕ್ಕೆ ಕೊನೆಯೇ ಇಲ್ಲ. ಏಕೆಂದರೆ ಅವರ ನಡೆ–ನುಡಿ–ನೆನಹುಗಳಲ್ಲೆಲ್ಲ ವ್ಯಾಪಿಸಿದ್ದ ಏಕಮಾತ್ರ ದೇವತೆ ಯೆಂದರೆ ಭಾರತಾಂಬೆ. ಅವರು ಅಮೇರಿಕಕ್ಕೆ ತೆರಳುವ ಮೊದಲು ಕನ್ಯಾಕುಮಾರಿಯಲ್ಲಿ, ಭಾರತದ ತುಟ್ಟತುದಿಯ ಬಂಡೆಯ ಮೇಲೆ ಕುಳಿತು ಅವಿರತವಾಗಿ ಮೂರು ದಿನಗಳ ಕಾಲ ಧ್ಯಾನಿಸಿದ್ದು ಸಗುಣ ಭಗವಂತನ ಮೇಲೂ ಅಲ್ಲ, ನಿರ್ಗುಣ ಪರಬ್ರಹ್ಮನ ಮೇಲೂ ಅಲ್ಲ; ಬದಲಾಗಿ ಈ ಸಗುಣ–ನಿರ್ಗುಣ ಉಪಾಸನೆಗಳೆಲ್ಲ ಬೆಳೆದು ನಿಲ್ಲಲು ಮಡಿಲಿನಾಸರೆಯನ್ನಿತ್ತ ಭಾರತಾಂಬೆಯ ಮೇಲೆ! ಅಮೇರಿಕದಲ್ಲಿ ಶಿಕಾಗೋದ ವಿಶ್ವಧರ್ಮ ಸಮ್ಮೇಳನದ ವೇದಿಕೆಯ ಮೇಲೆ ನಿಂತು ಸನಾತನ ಧರ್ಮದ ಪತಾಕೆಯನ್ನು ಮುಗಿಲೆತ್ತರಕ್ಕೆ ಹಾರಿಸಿ

ರಾಜಕೀಯವಾಗಿ ಪ್ರಭುರಾಷ್ಟ್ರವಾದ ಇಂಗ್ಲೆಂಡಿನ ಮೇಲೆ ತಮ್ಮ ಆಧ್ಯಾತ್ಮಿಕ ಪ್ರಭುತ್ವವನ್ನು ಬೀರಿ ಅಲ್ಲಿಂದ ತೆರಳುವಾಗ ಸ್ವಾಮಿ ವಿವೇಕಾನಂದರನ್ನು ಅವರ ಆಂಗ್ಲ ಸ್ನೇಹಿತನೊಬ್ಬ ಕೇಳುತ್ತಾನೆ: "ಈ ಸಂಪದ್ಭರಿತ, ಶಕ್ತಿಯುತ ಹಾಗೂ ವಿಲಾಸ ಪೂರ್ಣ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಾಲ್ಕು ವರ್ಷಗಳನ್ನು ಕಳೆದ ಮೇಲೆ ಈಗ ನಿಮಗೆ ನಿಮ್ಮ ಮಾತೃಭೂಮಿಯ ಬಗ್ಗೆ ಏನನ್ನಿಸುತ್ತದೆ?" ಆ ಕೂಡಲೇ ಸ್ವಾಮೀಜಿ ಮಿಂಚಿನಂತೆ ನೀಡಿದ ಉತ್ತರ ಚರಿತ್ರಾರ್ಹವಾದದ್ದು, ಪ್ರತಿಯೊಬ್ಬ ಭಾರತೀಯನೂ ತಿಳಿದಿರಬೇಕಾದದ್ದು. ಸ್ವಾಮೀಜಿ ಹೇಳುತ್ತಾರೆ :"ನಾನು ಭಾರತ ದಿಂದ ಹೊರಟಾಗಲೂ ಭಾರತವನ್ನು ಪ್ರೀತಿಸುತ್ತಿದ್ದೆ, ನಿಜ. ಆದರೆ ಈಗಲಾದರೋ, ನನಗೆ ಭಾರತದ ಕಣಕಣವೂ ಪವಿತ್ರ, ಭಾರತದಲ್ಲಿ ಬೀಸುವ ಗಾಳಿಯೆಲ್ಲವೂ ಪವಿತ್ರ, ಈಗ ನನಗೆ ಅದು ಪುಣ್ಯಭೂಮಿ, ಯಾತ್ರಾಸ್ಥಳ, ತೀರ್ಥಕ್ಷೇತ್ರ!"

ವಿಶ್ವವಂದ್ಯರಾದ ಸ್ವಾಮೀಜಿ ಆ ರಾತ್ರಿ ನಿದ್ರೆಯಿಲ್ಲದೆ ನೆಲದ ಮೇಲೆ ಉರುಳಾಡಿ ಭಗವಂತನನ್ನು ಕಣ್ಣೀರಿಟ್ಟು ಪ್ರಾರ್ಥಿಸಿಕೊಂಡದ್ದೂ ಭಾರತದ ಏಳ್ಗೆಗಾಗಿಯೇ!

ಸ್ವಾಮೀಜಿಯವರು ಅಮೇರಿಕಕ್ಕೆ ಹೋಗಿದ್ದಾಗಲೂ ಅವರ ಮನಸ್ಸೆಲ್ಲ ಭಾರತದ ಹಿತಚಿಂತನೆಯಲ್ಲೇ ಮುಳುಗಿತ್ತು. ಬಹು ದೂರದ ಅಪರಿಚಿತ ದೇಶದಲ್ಲಿ ಏಕಾಂಗಿಯಾಗಿ ಕಾರ್ಯ ನಿರ್ವಹಿಸುವಾಗಲೂ, ಅವರೆಂದೂ ತಮ್ಮ ವೈಯಕ್ತಿಕ ಸೌಕರ್ಯ ಕ್ಕಾಗಲಿ, ಜನಾದರಣೆಗಾಗಲಿ ಅಲ್ಲಿನ ಜನರೆದುರು ಬಣ್ಣಬಣ್ಣದ ಮಾತುಗಳನ್ನಾಡಿದವರಲ್ಲ. ಅಥವಾ ಭಾರತ ಆಗಿನ್ನೂ ಪರತಂತ್ರ ರಾಷ್ಟ್ರವಾಗಿದ್ದರಿಂದ, ಅಂಜಿಕೆಯಿಂದಾಗಿ ಇಲ್ಲಸಲ್ಲದ ಪ್ರಿಯ ನುಡಿಗಳನ್ನು ಹೇಳಲಿಲ್ಲ. ಬದಲಾಗಿ ಭಾರತದ ಆಧ್ಯಾತ್ಮಿಕ ಹಿರಿಮೆಯನ್ನು ನಿಸ್ಸಂದಿಗ್ಧವಾದ ಅಸ್ಖಲಿತ ವಾಣಿಯಲ್ಲಿ ಅಲ್ಲಿನ ಮೇಧಾವಿಗಳೂ ಭಾರತಕ್ಕೆ ಶಿರಬಾಗುವಂತೆ ಅವರು ಬೋಧಿಸಿ ದರು. ಹೀಗೆ ಮಾಡಿದವರಲ್ಲಿ ಪ್ರಪ್ರಥಮ ವ್ಯಕ್ತಿಯೆಂದರೆ ಸ್ವಾಮಿ ವಿವೇಕಾನಂದರು.

ವಿಶ್ವಧರ್ಮ ಸಮ್ಮೇಳನದಲ್ಲಿ ಅವರ ಭಾಷಣವನ್ನು ಕೇಳಿದ ಶ್ರೀಮತಿ ಅನಿಬೆಸೆಂಟ್ ಅವರನ್ನು ಹೀಗೆ ಬಣ್ಣಿಸುತ್ತಾರೆ: "ಪ್ರಥಮ ನೋಟದಲ್ಲಿ ನನಗೆ ಅವರು ಸಂನ್ಯಾಸಿ ಎನ್ನುವುದಕ್ಕಿಂತ ಹೆಚ್ಚಾಗಿ ಯೋಧನಂತೆಯೇ ಕಂಡರು! ಏಕೆಂದರೆ ಆಗ ಅವರ ವ್ಯಕ್ತಿತ್ವದಲ್ಲಿ ರಾಷ್ಟ್ರಾಭಿಮಾನ ಸ್ವಜನಾಭಿಮಾನಗಳು ಕಿಡಿಗಳಂತೆ ಸಿಡಿಯುತ್ತಿದ್ದವು. ತನ್ನ ಸನಾತನ ಧರ್ಮವು ಅಮೇರಿಕದ 'ಶ್ರೇಷ್ಠತಮ' ಧರ್ಮಕ್ಕಿಂತ ತೃಣಮಾತ್ರವಾದರೂ ಕನಿಷ್ಠವೆಂದು ಒಪ್ಪಿಕೊಳ್ಳಲು ಅವರು ಸಿದ್ಧರಿರಲಿಲ್ಲ. ಭಾರತಾಂಬೆಯ ಸುಪುತ್ರರೂ, ರಾಯಭಾರಿಯೂ ಆದ ಅವರು ಇದ್ದಲ್ಲಿ, ಸೊಕ್ಕಿದ ಪಾಶ್ಚಾತ್ಯ ರಾಷ್ಟ್ರಗಳೆದುರು ಭಾರತವು ಅಪಮಾನಕ್ಕೀಡಾಗಲು ಸಾಧ್ಯವೇ ಇರಲಿಲ್ಲ. ಭಾರತಾಂಬೆಯ ಸಂದೇಶವನ್ನು ಅವರು ಹೊತ್ತು ತಂದಿದ್ದರು. ಆಕೆಯ ಹೆಸರಿನಲ್ಲಿ ಮಾತನಾಡಿದರು; ಜನರು ಆಕೆಯ ಹಿರಿಮೆಯನ್ನು ಸ್ಮರಿಸುವಂತೆ ಮಾಡಿದರು."